Pending
Website ನಲ್ಲಿ ಹಾಕಿಸಿ

# ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರ, 18ನೇ ಅಡ್ಡರಸ್ತೆ, ಬೆಂಗಳೂರು-560012

ಸಂಖ್ಯೆ: ಪಪೂಶಿ/ಸಿಬ್ಬಂದಿ-1/ವಾ.ದು/ವಿ.ವಾ-01/2014-15 ದಿನಾಂಕ:30-03-2016

## ಬಹಿರಂಗ ಹರಾಜು ಪ್ರಕಟಣೆ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, 18ನೇ ಅಡ್ಡರಸ್ತೆ, ಬೆಂಗಳೂರು-560 012, ರವರು ಈ ಕೆಳಗೆ ನಮೂದಿಸಿರುವ ಇಲಾಖಾ ವಾಹನಗಳನ್ನು ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡುತ್ತಿದ್ದು, ಹರಾಜಿನ ಪ್ರಕ್ರಿಯೆಯಲ್ಲಿ ಭಾಗವಹಿಸಲು ಆಸಕ್ತ ಬಿಡ್‌ದಾರರು (ವ್ಯಾಪಾರಸ್ಥರು) ಈ ಕೆಳಗೆ ನಮೂದಿಸಿದ ದಿನಾಂಕದಂದು ಹಾಜರಾಗಿ ಬಹಿರಂಗ ಹರಾಜಿನಲ್ಲಿ ಭಾಗವಹಿಸುವುದು.

ವಿವರಗಳು

| ಕ್ರಸ | ವಾಹನದ ಮಾದರಿ | ವಾಹನದ ಸಂಖ್ಯೆ | ಇಂಧನದ ವಿಧ |
|---|---|---|---|
| 1 | 1996ರ ಟೆಂಪೂ ಟ್ರಾವಲರ್ (ಬಾಜಾಜ್) | KA-01 G-2261 | ಡೀಸಲ್ |
| 2 | 1999ರಜೀಪ್ (ಮಹೇಂದ್ರ ಮತ್ತು ಮಹೇಂದ್ರ) | KA-01 G-3346 | ಡೀಸಲ್ |
| 3 | 1999ರ ಜೀಪ್ (ಮಹೇಂದ್ರ ಮತ್ತು ಮಹೇಂದ್ರ) | KA-01 G-3345 | ಡೀಸಲ್ |
| 4 | 2000ರ ಜೀಪ್ (ಮಹೇಂದ್ರ ಮತ್ತು ಮಹೇಂದ್ರ) | KA-01 G-3537 | ಡೀಸಲ್ |
| 5 | 1999ರ ಕಾರು(ಟಾಟ ಇಂಡಿಕಾ) | KA-01 G-3497 | ಪೆಟ್ರೋಲ್ |

ಮೇಲ್ಕಂಡ ಇಲಾಖಾ ವಾಹನಗಳನ್ನು ದಿನಾಂಕ:30-03-2016 ರಂದು ನಿಗದಿಪಡಿಸಿದ್ದನ್ನು ದಿನಾಂಕ:16-05-2016ಕ್ಕೆ ಮಧ್ಯಾಹ್ನ 3:00 ಗಂಟೆಗೆ ಮುಂದೂಡಿದೆ. ಪದವಿ ಪೂರ್ವ ಶಿಕ್ಷಣ ಇಲಾಖೆಯ ಆವರಣದಲ್ಲಿ ಈ ಕೆಳಕಂಡ ಷರತ್ತು ಹಾಗೂ ನಿಯಮಗಳಿಗೊಳಪಟ್ಟು ಬಹಿರಂಗ ಹರಾಜು ಮಾಡಲಾಗುವುದು. ಹರಾಜನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕು ನಿರ್ದೇಶಕರಾಗಿರುತ್ತದೆ.

**ಷರತ್ತು ಹಾಗೂ ನಿಯಮಗಳು:**

1. ಭಾಗವಹಿಸುವ ಬಿಡ್‌ದಾರರು ಬಿಡ್ ಮಾಡುವ ಮೊದಲು ಇ.ಎಂ.ಡಿ ಮೊತ್ತವನ್ನು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ರವರ ಹೆಸರಿನಲ್ಲಿ (3 ಜೀಪ್‌ಗೆ ಸೇರಿ ರೂ.9,000-00, ಟೆಂಪೂ ಟ್ರಾವಲರ್ ಗೆ ರೂ.4,000-00, ಟಾಟ ಇಂಡಿಕಾ ಕಾರ್‌ಗೆ ರೂ.2,000-00 ಗಳಂತೆ ಪ್ರತ್ಯೇಕವಾಗಿ ಬ್ಯಾಂಕ್ ಬೇಡಿಕೆ ಹುಂಡಿ(ಡಿ.ಡಿ)) ದಿನಾಂಕ:16-05-2016ರ ಬೆಳಿಗ್ಗೆ 10:00 ರಿಂದ 11:30ರವರೆಗೆ ಕಚೇರಿಯ ಆವರಣದಲ್ಲಿ ಸಲ್ಲಿಸಿ ನೊಂದಾಯಿಸಿಕೊಳ್ಳಬೇಕು.
2. ನೊಂದಾಯಿಸಿಕೊಂಡ ಬಿಡ್‌ದಾರರು ಮಾತ್ರ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

...2

3. ಅಂತಿಮಗೊಳಿಸಿದ ಒಪ್ಪಿದ ಬಿಡ್‌ದಾರರು ಪೂರ್ಣ ಮೊತ್ತವನ್ನು (ಸರ್ಕಾರದ ಅದೇಶದಂತೆ ವಿಧಿಸಿರುವ ತೆರಿಗೆಗಳೊಂದಿಗೆ) ಬಿಡ್ ಮಾಡಿದ ದಿನವೇ ಡಿ.ಡಿ ಮೂಲಕ ಸಲ್ಲಿಸತಕ್ಕದು.
4. ಪ್ರಕ್ರಿಯೆ ಪೂರೈಸಿದ ಮಾರನೇ ದಿನದ ಒಳಗಾಗಿ ವಾಹನವನ್ನು ತಮ್ಮ ವಶಕ್ಕೆ ಪಡೆದುಕೊಳ್ಳತಕ್ಕದ್ದು.
5. ಹರಾಜು ಮಾಡಲಾದ ಇಲಾಖಾ ವಾಹನಗಳು ಹೇಗಿದೆಯೋ ಹಾಗೆ ಯಥಾ ಸ್ಥಿತಿಯಲ್ಲಿ ವಿಲೇವಾರಿ ಮಾಡಲಾಗುವುದು.
6. ಬಿಡ್‌ದಾರರು ಮೇಲಿನ 3 ಮತ್ತು 4ನೇ ಷರತ್ತುಗಳನ್ನು ಪಾಲಿಸದೆ ಇದ್ದಲ್ಲಿ ಅವರು ನೀಡಿರುವ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
7. ಅನರ್ಹ ಬಿಡ್‌ದಾರರ ಇ.ಎಂ.ಡಿ ಮೊತ್ತವನ್ನು ಹಿಂದಿರುಗಿಸಲಾಗುವುದು.
8. ಪ್ರಾದೇಶೀಕ ಸಾರಿಗೆ ಅಧಿಕಾರಿಗಳು ನಿಗದಿ ಪಡಿಸಿರುವ ಮೊತ್ತಕ್ಕೆ ಬಿಡ್‌ಬಾರದಿದ್ದಲ್ಲಿ ಆ ಬಿಡ್‌ನ್ನು ತಿರಸ್ಕರಿಸುವ ಹಕ್ಕು ಮಾನ್ಯ ನಿರ್ದೇಶಕರು ಹೊಂದಿರುತ್ತಾರೆ.
9. ಹರಾಜಿನಲ್ಲಿ ಯಶಸ್ವಿಯಾಗುವ ಖರೀದಿದಾರರು ಸಂಬಂಧಿಸಿದ ವಾಹನದ ಮೊತ್ತದ ಮೇಲಿನ ವ್ಯಾಟ್ ತೆರಿಗೆಯನ್ನು ನಿಯಮಾನುಸಾರ ಸಂಬಂಧಿಸಿದ ಕಚೇರಿಗೆ ಪಾವತಿಸಿ ವಾಹನವನ್ನು ಸುಪರ್ಧಿಗೆ ಪಡೆಯುವ ಸಮಯದಲ್ಲಿ ದಾಖಲೆಯನ್ನು ಸಲ್ಲಿಸುವುದು.
10. ಹರಾಜು ಮಾಡಲಾಗುವ ಇಲಾಖಾ ವಾಹನಗಳನ್ನು ಸರ್ಕಾರಿ ರಜಾ ದಿನಗಳಂದು ಹೊರತುಪಡಿಸಿ ಉಳಿದ ದಿನಗಳಂದು ಕಛೇರಿ ವೇಳೆಯಲ್ಲಿ ಪರಿಶೀಲಿಸಬಹುದು.
11. ಹೆಚ್ಚಿನ ವಿವರಗಳನ್ನು ಸಹಾಯಕ ನಿರ್ದೇಶಕರು (ಆಡಳಿತ) ರವರಿಂದ ಮತ್ತು ಇಲಾಖಾ ಅಂತರ್‌ಜಾಲದಲ್ಲಿ (Website : http: //www. Pue.kar.inc.in. ) ಪಡೆಯಬಹುದು.

ಜಂಟಿ ನಿರ್ದೇಶಕರು(ಆಡಳಿತ),
ಪದವಿ ಪೂರ್ವಶಿಕ್ಷಣ ಇಲಾಖೆ.

ಹರಾಜಿನಲ್ಲಿ ಭಾಗವಹಿಸಲು ಇಚ್ಚೆಯುಳ್ಳವರಿಗೆ.

ಪ್ರತಿಗಳು:
1. ಜಂಟಿ ನಿರ್ದೇಶಕರು, ಆಡಳಿತ/ಮಾನ್ಯತೆ ಮತ್ತು ಅನುದಾನ/,ಮೂಲಭೂತ ಸೌಕರ್ಯ/ ಶೈಕ್ಷಣಿಕ ಮತ್ತು ಪರೀಕ್ಷಾ ಶಾಖೆಯ ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. ರವರಿಗೆ
2. ಉಪನಿರ್ದೇಶಕರು (ಆಡಳಿತ), ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
3. ಸಹಾಯಕ ನಿರ್ದೇಶಕರು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅಂತರ್‌ಜಾಲದಲ್ಲಿ ಪ್ರಕಟಿಸಲು.
4. ಲೆಕ್ಕಾಧಿಕಾರಿಗಳು, ಲೆಕ್ಕಪತ್ರ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ, ಬಹಿರಂಗ ಹರಾಜಿನ ದಿನಾಂಕ ಮತ್ತು ಸಮಯದಂದು ಹಾಜರಿರಲು ಕೋರಿದೆ.
5. ಕಚೇರಿ ಪ್ರತಿ.